Online Newspaper Clipping Service
Dtd-Saturday, 28th, July- 2018

DECCAN HERALD



# Doctors' protest likely to hit OPD services today

BENGALURU: Outpatient departments (OPD) in certain hospitals and nursing homes in the state are likely to be affected on Saturday as the Indian Medical Association (IMA) has called for observing "Dhikkar Diwas" to protest against the proposed National Medical Commission Bill, 2017.

The bill is expected to be tabled in Parliament on Saturday.

During the protests, doctors may abstain from work in OPDs and defer elective surgeries.

Dr H N Ravindra, president, Karnataka IMA said government hospitals will function as usual.

He said the protest is by doctors and not the hospitals.

"We had opposed the Bill, which has certain draconian anti-poor and pro-rich clauses, previously too. The Centre wants to dissolve the Medical Council of India (MCI), which has 125 members, with representatives from each state and reduce it to only nine members in the proposed NMC Bill," he said.

"There are 27,000 IMA members in the state and anybody is free to participate in the protest. A few doctors may abstain from work from 6 am to 6 pm," he added.

In the memorandum, IMA, Karnataka chapter said, "The concept of centrally administered final MBBS exam will be highly detrimental to students from rural and tribal areas.

"These exams have an inbuilt urban and rich bias in them thus depriving the students of downtrodden and backward communities of opportunities."

## Memorandum to PM

The memorandum will be submitted to the deputy commissioner, Bengaluru Urban to be sent to the Prime Minister on Saturday.

Dr Ravindra S Wankhedkar, national president, IMA in his statement said, "In spite of the deep resentment and opposition of the medical profession of the country, Government of India is going ahead with the enactment of the National Medical Commission Bill-2017."

"We are left with no choice but to resist the move with determination and resolve," he added.

DH News Service

# PM's research fellowship open for all university students

## The ministry will soon issue a notification in this regard

Prakash Kumar

**NEW DELHI: Meritorious science and technology graduates from any university in the country will now be able to apply for a Centre-sponsored special fellowship to pursue M Tech or PhD.**

The human resource development (HRD) ministry has decided to expand the scope of the Prime Minister's Research Fellowship (PMRF) scheme to allow meritorious students from all higher education institutions avail its benefit.

"The decision was taken in view of the growing demand from the students and suggestions from various stakeholders," the ministry sources said.

The ministry will soon issue a notification in this regard.

### Centrally-fund colleges

The Centre launched the scheme in February this year to attract more engineering graduates from the centrally-funded institutions to pursue MTech or PhD programmes to boost research.

The scheme also aims at producing qualified teachers to meet the shortage of faculty members being faced by the higher educational institutions in the country.


Under the PMRF scheme, a student gets the fellowship of Rs 70,000 per month for the first two years, Rs 75,000 per month for the third year and Rs 80,000 per month in the fourth and fifth year of their programme.

Apart from this, a research grant of Rs 2.00 lakh per year is also provided to each of the fellows selected under the scheme for a period of five years to cover their academic contingency expenses and "for foreign/national travel expenses".

The special scholarship scheme provides for "rigorous review" of the performance of fellows. The continuation of the next year's fellowship depends on the outcome of the review of the students' performance.

A maximum of 3,000 fellows would be selected for a three-year period, beginning 2018-19.

DH News Service




# Left against replacing UGC with HECI

NEW DELHI, DHNS: The CPM On Thursday claimed that the NDA government's push for creating a new higher education architecture in place of the UGC was aimed at "appeasing" corporate interests, influencing the way Indian youth think and enforcing the "fascistic" ideology of the RSS.

Releasing a letter written to Prime Minister Narendra Modi against the draft Higher Education Commission of India Bill, CPI general secretary Sitaram Yechury said his party would strive to build a broad-based movement against it and listed "secular" parties like the BSP, SP, RJD, NCP, JD(S) and the DMK among others as supporting their stand. The CPM will also rope in teachers, intellectuals and students in this fight.

Objecting to the draft bill, he said, "the bill is guided by twin concerns that threaten to destroy the foundations of Higher Education in independent India and impede the salutary role it has played, over decades, in empowering the common people with learning, jobs and social confidence. The twin concerns are privatisation and social exclusion."

DH News Service

# Enrolment ratio slow in higher education

NEW DELHI, DHNS: The gross enrollment ratio (GER) of students in higher education continues to grow at a slow pace even though the country witnessed an increase in the number of universities from 723 in 2013-14 to 903 in 2017-18.

According to a latest All India Survey on Higher Education (AISHE) report released on Friday, the total enrolment in country's universities and colleges has been estimated to be 3.66 crore in 2017-18 with 1.92 crore men and 1.74 crore women.

The report pegged the GER in higher education in India at 25.8%. The GER of men in higher education came at 26.3% while it reached 25.4% for the women.

The increase in the GER for 2017-18 over that of 2016-17 remained at just 0.6%.

The annual survey, conducted under the aegis of the Human Resource Development (HRD) Ministry, had recorded the GER at 25.2% in 2016-17. The GER of men in 2016-17 was pegged at 26% while it was estimated to be 24.5% for the women students.

The GER in higher education is calculated for 18-23 years of age group.

Though the Human Resource Development (HRD) ministry is hoping to increase the GER in higher education to at least 30% by 2022, the country has witnessed an increase in the GER by just 1.5% since 2017-18. The GER in 2014-15 was estimated to be at 24.3%.

According to the AISHE report released by the HRD Minister Prakash Javadekar at an event here, the number of colleges in the country came down to 39,050 in 2017-18 from 40,026 in 2016-17.

The number of standalone institutions in the country also came down to 10,011 in 2017-18 from 11,669 in 2016-17.

The report, however, remained silent on the fall in the number of colleges and stand alone institutions in the country.

In 2017-18, the number of PhD holders slightly grew up compared to that of the previous academic year with increase in the number of colleges offering PhD programmes. As many as 34,400 students were awarded PhD during 2017. In 2016-17, a total of 28,779 students were awarded PhD.

DH News Service

## ವೈದ್ಯರ ಮುಷ್ಕರ: ರೋಗಿಗಳಿಗೆ ಚಿಕಿತ್ಸೆ ನೀಡಲು ಸರ್ಕಾರಿ ಆಸ್ಪತ್ರೆಗಳು ಸಜ್ಜು

# ಇಂದು ಖಾಸಗಿ ಆಸ್ಪತ್ರೆ ಒಪಿಡಿ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳ ವೈದ್ಯರು ಶನಿವಾರ ಮುಷ್ಕರ ನಡೆಸಲಿದ್ದು, ಆಸ್ಪತ್ರೆಗಳ ಹೊರರೋಗಿಗಳ ವಿಭಾಗದಲ್ಲಿ (ಒಪಿಡಿ) ಚಿಕಿತ್ಸೆ ಬಂದ್ ಆಗಲಿದೆ. ಖಾಸಗಿ ಆಸ್ಪತ್ರೆಗಳನ್ನು 'ನೆಚ್ಚಿ'ಕೊಂಡಿರುವ ರೋಗಿಗಳು ಪರದಾಡಬೇಕಾದ ಸ್ಥಿತಿ ಎದುರಾಗಲಿದೆ.

ಆದರೆ, ಸರ್ಕಾರಿ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳ ತುರ್ತು ಚಿಕಿತ್ಸೆ ವಿಭಾಗಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ.

'ರಾಷ್ಟ್ರೀಯ ವೈದ್ಯಕೀಯ ಆಯೋಗ' ರಚಿಸಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮ ವಿರೋಧಿಸಿ ಭಾರತೀಯ ವೈದ್ಯಕೀಯ ಸಂಘ 'ಧಿಕ್ಕಾರ್ ದಿವಸ್' ಹೆಸರಿನಲ್ಲಿ ಪ್ರತಿಭಟನೆಗೆ ಕರೆ ನೀಡಿದೆ. ಸಂಘದ ಸದಸ್ಯರಾಗಿರುವ 27,000 ವೈದ್ಯರು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದಾರೆ.

**ಸರ್ಕಾರಿ ಆಸ್ಪತ್ರೆ ಸಿಬ್ಬಂದಿಗೆ ಎಚ್ಚರಿಕೆ:** ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದೇ ರೋಗಿಗಳಿಗೆ ತೊಂದರೆಯಾಗುವುದನ್ನು ತಡೆಯಲು ಮುಂದಾಗಿರುವ ಸರ್ಕಾರ, ಈ ಸಂಬಂಧ ಸುತ್ತೋಲೆ ಹೊರಡಿಸಿದೆ. ಸರ್ಕಾರಿ ಆಸ್ಪತ್ರೆಗಳು ಪೂರ್ಣಪ್ರಮಾಣದಲ್ಲಿ ಕೆಲಸ ಮಾಡುವಂತೆ ಎಲ್ಲಾ ಜಿಲ್ಲೆಯ। ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಶಸ್ತ್ರಚಿಕಿತ್ಸಕರು ನೋಡಿಕೊಳ್ಳಬೇಕು. ವೈದ್ಯರು ಹಾಗೂ ಉಳಿದ ಕೆಲಸ ನಿರ್ವಹಿಸುವ ಸಿಬ್ಬಂದಿ ರಜೆ ತೆಗೆದುಕೊಳ್ಳದೆ ಕಾರ್ಯ ನಿರ್ವಹಿಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

## ಮಸೂದೆಯಲ್ಲಿರುವ ಪ್ರಮುಖ ಅಂಶಗಳು

- ವೈದ್ಯಕೀಯ ಶಿಕ್ಷಣ ಹಾಗೂ ವೈದ್ಯ ವೃತ್ತಿಯ ಮೇಲೆ ಈ ಆಯೋಗ ನಿಯಂತ್ರಣ ಹೊಂದಿರಲಿದೆ. ಶೇ 40ರಷ್ಟು ಸೀಟುಗಳ ಶುಲ್ಕವನ್ನು ಇದೇ ನಿಗದಿ ಮಾಡಲಿದೆ
- ಎಂಬಿಬಿಎಸ್ ಮುಗಿಸಿದ ವಿದ್ಯಾರ್ಥಿಗಳು ವೃತ್ತಿಯನ್ನು ಆರಂಭಿಸುವ ಮುನ್ನ ಆಯೋಗ ನಡೆಸುವ ಪರೀಕ್ಷೆಯಲ್ಲಿ ಹಾಜರಾಗಿ ಪ್ರಮಾಣಪತ್ರ ಪಡೆಯಬೇಕು
- ವೈದ್ಯರ ವಿರುದ್ಧ ದೂರುಗಳಿದ್ದಲ್ಲಿ, ಅವುಗಳನ್ನು ಸಾರ್ವಜನಿಕರು ರಾಜ್ಯ ಮಟ್ಟದಲ್ಲಿ ರಚನೆಯಾಗಲಿರುವ ಆಯೋಗಕ್ಕೆ ಸಲ್ಲಿಸಲು ಮಸೂದೆ ಅವಕಾಶ ಕಲ್ಪಿಸುತ್ತದೆ.
- ರಾಜ್ಯ ಆಯೋಗದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ವೈದ್ಯರಿಗೆ ಅವಕಾಶ ಇದೆ.

## ಪ್ರತಿಭಟನೆಗೆ ಕಾರಣವೇನು?

ಶಿಕ್ಷಣ ಹಾಗೂ ಆರೋಗ್ಯ ರಾಜ್ಯಕ್ಕೆ ಸಂಬಂಧಿಸಿದ ವಿಷಯ. ಈ ವಿಷಯದಲ್ಲಿ ಕೇಂದ್ರ ಮೂಗು ತೂರಿಸುವುದು ಬೇಡ ಎಂದು ವಾದಿಸುತ್ತಿರುವ ಭಾರತೀಯ ವೈದ್ಯಕೀಯ ಸಂಘ, ಮಸೂದೆಯ ವಿರುದ್ಧ ಈ ಹೋರಾಟಕ್ಕೆ ಇಳಿದಿದೆ.



**4,000**
ರಾಜ್ಯದಲ್ಲಿರುವ ಒಟ್ಟು ಖಾಸಗಿ ಆಸ್ಪತ್ರೆಗಳ ಸಂಖ್ಯೆ

**2 ಲಕ್ಷ**
ಪ್ರತಿದಿನ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಹೊರರೋಗಿಗಳು

**2,500**
ಖಾಸಗಿ ಆಸ್ಪತ್ರೆಗಳ ಒಪಿಡಿ ಬಂದ್ ಆಗುವ ಸಾಧ್ಯತೆ

ಬೆಳಿಗ್ಗೆ 6 ರಿಂದ ಸಂಜೆ 6
ಒಪಿಡಿ ಬಂದ್ ಆಗುವ ಸಮಯ

ಉದಯವಾಣಿ



ಬೆ.6ರಿಂದ ಸಂಜೆ 6ರವರೆಗೆ ಸಿಗಲ್ಲ ಸೇವೆ

# ಇಂದು ಖಾಸಗಿ ವೈದ್ಯರ ಮುಷ್ಕರ

ಬೆಂಗಳೂರು/ನವದೆಹಲಿ: ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ)ವಿಧೇಯಕ ವಿರೋಧಿಸಿ ಭಾರತೀಯ ವೈದ್ಯಕೀಯ ಸಂಘಟನೆ ರಾಷ್ಟ್ರಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ. 2.15 ಲಕ್ಷ ವೈದ್ಯರು ದಿನಪೂರ್ತಿ ಕೆಲಸ ಬಂದ್ ಮಾಡಿ ಹೋರಾಟ ನಡೆಸಲಿದ್ದಾರೆ.



ಕರ್ನಾಟಕದಲ್ಲೂ ಮುಷ್ಕರ ಅಂಗವಾಗಿ ರಾಜ್ಯದ ಖಾಸಗಿ ವೈದ್ಯರು ಬೆಳಗ್ಗೆ 6 ರಿಂದ ಸಂಜೆ 9ರವರೆಗೆ ಹೊರರೋಗಿಗಳ ವಿಭಾಗ (ಒಪಿಡಿ) ಬಂದ್ ಮಾಡಿ ಹೋರಾಟ ಮಾಡಲಿದ್ದಾರೆ. ಆದರೆ, ತುರ್ತು ಚಿಕಿತ್ಸೆ ಹಾಗೂ ಒಳರೋಗಿಗಳಿಗೆ ಸೇವೆ ಒದಗಿಸಲು ತೀರ್ಮಾನಿಸಿದ್ದಾರೆ. ಸಂಜೆ 6 ಗಂಟೆ ಬಳಿಕ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲೂ ಒಪಿಡಿ ಸೇವೆ ಸಿಗಲಿದೆ.

ಖಾಸಗಿ ನರ್ಸಿಂಗ್ ಹೋಮ್ ಮತ್ತು ಆಸ್ಪತ್ರೆಗಳಲ್ಲಿ ಒಪಿಡಿ ಮುಚ್ಚುವುದಷ್ಟೇ ಅಲ್ಲದೆ ಕ್ಲಿನಿಕ್‌ಗಳನ್ನು ತೆರೆಯದಂತೆ ಐಎಂಎ ಮನವಿ ಮಾಡಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಿಗೂ ತರಗತಿ ನಡೆಸದಂತೆ ತಿಳಿಸಿದೆ. ಹೀಗಾಗಿ ಶನಿವಾರ ಕ್ಲಿನಿಕ್‌ಗಳು, ಖಾಸಗಿ ಕಾಲೇಜುಗಳು ತೆರೆದಿರುವುದು ಅನುಮಾನವಾಗಿದೆ. ▶ 10ನೇ ಪುಟಕ್ಕೆ

## ಸರ್ಕಾರಿ ವೈದ್ಯರಿಗಿಲ್ಲ ರಜೆ

ಐಎಂಎ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯವಾಗದಂತೆ ಕಾರ್ಯನಿರ್ವಹಿಸಬೇಕು. ರೋಗಿಗಳಿಗೆ ಅಗತ್ಯ ಸೇವೆ ಒದಗಿಸಬೇಕೆಂದು ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಎಲ್ಲ ರಾಜ್ಯಗಳ ವೈದ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಿಗೆ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ನಿರೀಕ್ಷೆಯಿದೆ. ಹೀಗಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ವೈದ್ಯರಿಗೆ ರಜೆ ನೀಡಿಲ್ಲ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 124 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಎಲ್ಲ ಸರ್ಕಾರಿ ಆಸ್ಪತ್ರೆಗಳ ಹೊರ ರೋಗಿಗಳ ವಿಭಾಗ ಕೂಡ ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಕಾರ್ಯನಿರ್ವಹಿಸಲಿವೆ. ರೋಗಿಗಳಿಗೆ ಸಮಸ್ಯೆ ಆಗುವುದಿಲ್ಲ ಎಂದಿದ್ದಾರೆ ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ ಗೋಳೂರು.

# ಹೆಚ್ಚುವರಿ ಶುಲ್ಕಕ್ಕೆ ಸರ್ಕಾರದ ಬ್ರೇಕ್

• ರಾಜು ಖಾರ್ವಿ ಕೊಡೇರಿ

ಬೆಂಗಳೂರು: ಇಂಜಿನಿಯರಿಂಗ್, ಆರ್ಕಿಟೆಕ್ಚರ್ ಕೋರ್ಸ್‌ಗಳ ಸರ್ಕಾರಿ ಕೋಟಾದಡಿ ಸೀಟು ಪಡೆದ ವಿದ್ಯಾರ್ಥಿಗಳಿಂದ ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ಬೋಧನಾ ಶುಲ್ಕದ ಹೆಸರಿನಲ್ಲಿ ವಸೂಲಿ ಮಾಡುತ್ತಿದ್ದ ಹೆಚ್ಚುವರಿ ಶುಲ್ಕಕ್ಕೆ ರಾಜ್ಯ ಸರ್ಕಾರ ಕಡಿವಾಣ ಹಾಕಿದೆ.

2018–19ನೇ ಸಾಲಿಗೆ ರಾಜ್ಯ ಸರ್ಕಾರವೇ ರಾಜ್ಯದ ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ 54,430 ರೂ. ಬೋಧನಾ ಶುಲ್ಕ ನಿಗದಿ ಮಾಡಿದ್ದು ನಿಗದಿ ಮಾಡಿದಷ್ಟೇ ಶುಲ್ಕವನ್ನು ಪಡೆಯಬೇಕು ಎಂದು ಎಚ್ಚರಿಕೆ ಸಹ ನೀಡಿದೆ.

ರಾಜ್ಯದಲ್ಲಿ ತಲಾ 15 ಖಾಸಗಿ ಹಾಗೂ ಡೀಮ್ಡ್ ವಿವಿಗಳಿದ್ದು ಈ ಎಲ್ಲ ವಿವಿಗಳಲ್ಲೂ ಒಟ್ಟು ಪ್ರವೇಶಾತಿಯಲ್ಲಿ ಇಂತಿಷ್ಟೇ ಪ್ರಮಾಣದ ಸೀಟುಗಳು ಸರ್ಕಾರಿ ಕೋಟಾದ ಸೀಟುಗಳು ಇರುತ್ತದೆ(ಇನ್‌ಟೇಕ್ ಆಧಾರದಲ್ಲಿ). ▶ 10ನೇ ಪುಟಕ್ಕೆ

# ಉನ್ನತ ಶಿಕ್ಷಣ ಇಲಾಖೆ 5,000 ಹುದ್ದೆ ಭರ್ತಿ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಐದು ಸಾವಿರ ಹುದ್ದೆಗಳನ್ನು ಆರು ತಿಂಗಳಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 3800 ಬೋಧಕ ಸಿಬ್ಬಂದಿ, 800 ಖಾಲಿ ಹುದ್ದೆ, 395 ಪ್ರಾಂಶುಪಾಲರ ಹುದ್ದೆ ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸುವಂತೆ ಹಣಕಾಸು ಇಲಾಖೆ ತಿಳಿಸಿದೆ. ಶೀಘ್ರ, ಪ್ರಸ್ತಾವನೆ ಸಲ್ಲಿಸಿ ಪಾರದರ್ಶಕ ವ್ಯವಸ್ಥೆಯಡಿ ಏಕಕಾಲದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಹೇಳಿದರು.

ಹುದ್ದೆ ಖಾಲಿ ಇದ್ದರೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷ ನೇಮಿಸಿಕೊಳ್ಳಲಾಗಿದ್ದ 10,500 ಅತಿಥಿ ಉಪನ್ಯಾಸಕರನ್ನು ಈ ವರ್ಷವೂ ಮುಂದುವರಿಸಲಾಗಿದೆ ಎಂದು ತಿಳಿಸಿದರು.

# ಹೆಚ್ಚುವರಿ ಶುಲ್ಕಕ್ಕೆ ಸರ್ಕಾರದ ಬ್ರೇಕ್

**1ನೇ ಪುಟದಿಂದ ▶** ಆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸರ್ಕಾರ ಭರ್ತಿ ಮಾಡುತ್ತದೆ. ಪ್ರಸಕ್ತ ಸಾಲಿನ ಸೀಟ್ ಮ್ಯಾಟ್ರಿಕ್ಸ್‌ಗಳನ್ನು ಪ್ರಾಧಿಕಾರಕ್ಕೆ ನೀಡಲಾಗಿದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಉದಯವಾಣಿಗೆ ಖಚಿತಪಡಿಸಿದ್ದಾರೆ.

ಪ್ರತಿ ವರ್ಷ ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ಬೋಧನಾ ಶುಲ್ಕ ನಿಗದಿಗೆ ಸಮಿತಿ ರಚನೆ ಮಾಡಿಕೊಳ್ಳುತ್ತವೆ. ಆ ಸಮಿತಿಯ ಶಿಫಾರಸಿನಂತೆ ಬೋಧನಾ ಶುಲ್ಕ ನಿಗದಿ ಮಾಡಲಾಗುತ್ತದೆ. ಬೋಧನಾ ಶುಲ್ಕ ಹೇಗೆ ಮತ್ತು ಎಷ್ಟು ನಿಗದಿ ಮಾಡಬೇಕು ಎಂಬುದರ ಬಗ್ಗೆ ಸರ್ಕಾರದ ಮಾರ್ಗಸೂಚಿಯೂ ಸ್ಪಷ್ಟವಿದೆ.

ಆದರೆ, ಖಾಸಗಿ ಮತ್ತು ಡೀಮ್ಡ್ ವಿವಿಗಳಲ್ಲಿ ಇದ್ಯಾವುದೂ ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಿರಲಿಲ್ಲ. ನೆಪಮಾತ್ರಕ್ಕೆ ಸಮಿತಿ ರಚಿಸಿಕೊಂಡು ತಮಗೆ ಬೇಕಾದ ರೀತಿಯಲ್ಲಿ ಬೋಧನಾ ಶುಲ್ಕ ನಿಗದಿ ಮಾಡುತ್ತಿದ್ದವು. ಬೋಧನಾ ಶುಲ್ಕದ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಬಗ್ಗೆ ವಿದ್ಯಾರ್ಥಿಗಳಿಂದ ಸರ್ಕಾರಕ್ಕೆ ಹಲವು ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

**ಬೋಧನಾ ಶುಲ್ಕ ನಿಗದಿ:** ವಿಶ್ವವಿದ್ಯಾಲಯಗಳ ಅಧಿನಿಯಮದ ಅನ್ವಯ, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಬೋಧನಾ ಶುಲ್ಕ ನಿಗದಿಗೆ ಸಮಿತಿ ರಚನೆ ಮಾಡಲಾಗುತ್ತದೆ. 50 ಸಾವಿರಕ್ಕಿಂತ ಹೆಚ್ಚು ಬೋಧನಾ ಶುಲ್ಕ ನಿಗದಿ ಮಾಡಿದ ವಿವಿಗಳ ಶುಲ್ಕ 50 ಸಾವಿರ ರೂ.ಗಳಿಗೆ ಮತ್ತು 50 ಸಾವಿರ ರೂ.ಗಿಂತ ಕಡಿಮೆ ನಿಗದಿ ಮಾಡಿದ ಶುಲ್ಕ 45 ಸಾವಿರ ರೂ.ಗಳಿಗೆ ನಿಗದಿ ಪಡಿಸುವ ಅಧಿಕಾರ ಸಮಿತಿಗೆ ಸೇರಿದ್ದಾಗಿತ್ತು.

ಇದೇ ವ್ಯವಸ್ಥೆಯಡಿ ಬೋಧನಾ ಶುಲ್ಕ ನಿಗದಿ 2015- 16ನೇ ಸಾಲಿನಿಂದ ನಡೆದುಕೊಂಡು ಬರುತ್ತಿವೆ. 2018-19ನೇ ಸಾಲಿಗೆ ರಾಜ್ಯ ಸರ್ಕಾರ ಎಲ್ಲ ಡೀಮ್ಡ್ ಮತ್ತು ಖಾಸಗಿ ವಿವಿಗಳ ಸರ್ಕಾರಿ ಕೋಟಾದ ಸೀಟಿಗೆ ಬೋಧನಾ ಶುಲ್ಕ ನಿಗದಿ ಮಾಡಿದೆ. ಬೋಧನಾ ಶುಲ್ಕವಾಗಿ 56,430 ರೂ. ಗಳನ್ನು ಮಾತ್ರ ಪಡೆಯಬೇಕು ಎಂದು ನಿರ್ದೇಶಿಸಿದೆ.

**ಬೋಧನಾ ಶುಲ್ಕ ತಕ್ಷಣ ಹಿಂದಿರುಗಿಸಿ :** ಪ್ರವೇಶ ಪಡೆದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ವಿದ್ಯಾಭ್ಯಾಸ ಮೊಟಕುಗೊಳಿಸಿದರೆ, ಅಂತಹ ವಿದ್ಯಾರ್ಥಿಗಳು ಪ್ರವೇಶದ ಸಂದರ್ಭದಲ್ಲಿ ಸಂಸ್ಥೆಗೆ ಸಲ್ಲಿಸಿದ ಮೂಲ ದಾಖಲೆ ಮತ್ತು ಬೋಧನಾ ಶುಲ್ಕ ತಕ್ಷಣ ವಿದ್ಯಾರ್ಥಿಗೆ ಹಿಂದಿರುಗಿಸಬೇಕು. ಈ ಸಂಬಂಧ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಹೊರಡಿಸುವ ಮಾರ್ಗಸೂಚಿ ಮತ್ತು ನಿಯಮಗಳನ್ನು ತಪ್ಪದೇ ಪಾಲಿಸಬೇಕು ಎಂದು ಖಾಸಗಿ ಮತ್ತು ಡೀಮ್ಡ್ ವಿವಿಗೆ ಸೂಚಿಸಿದೆ.

ಉದಯವಾಣಿ



# ಇಂದು ಖಾಸಗಿ ವೈದ್ಯರ ಮುಷ್ಕರ

**1ನೇ ಪುಟದಿಂದ** ▸ ಎನ್‌ಎಂಸಿ ವಿಧೇಯಕ ಕೈ ಬಿಡುವಂತೆ ಜಿಲ್ಲಾಧಿಕಾರಿಗಳ ಮೂಲ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಐಎಂಎ ಅಡಿಯಲ್ಲಿ ನೊಂದಾಯಿತ 2.5ಲಕ್ಷ ಖಾಸಗಿ ವೈದ್ಯರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ಎಚ್.ಎನ್.ರವೀಂದ್ರ ತಿಳಿಸಿದ್ದಾರೆ.

ಒಂದೊಮ್ಮೆ ಎನ್‌ಎಂಸಿ ವಿಧೇಯಕ ಅನುಮೋದನೆಗೊಂಡರೆ ಇನ್ನೂ ತೀವ್ರಸ್ವರೂಪದ ಹೋರಾಟ ನಡೆಸಲು ಐಎಂಎ ನಿರ್ಧರಿಸಿದೆ ಎಂದು ಅವರು ಹೇಳಿದ್ದಾರೆ.

**ಎನ್‌ಎಂಸಿ ಜಾರಿಗೆ ವಿರೋಧವೇಕೆ?:** ಕೇಂದ್ರ ಸರ್ಕಾರ ಎನ್‌ಎಂಸಿ ವಿಧೇಯಕದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಸ್ವಾಯತ್ತೆ ಇರುವುದಿಲ್ಲ. ಈ ವಿಧೇಯಕ ಶ್ರೀಮಂತ ಮಕ್ಕಳಿಗಷ್ಟೇ ವೈದ್ಯಕೀಯ ಶಿಕ್ಷಣ ಪಡೆಯಲು ಸಹಕಾರಿಯಾಗಲಿದೆ ಎಂದು ಐಎಂಎಯಲ್ಲಿ ನೊಂದಾಯಿತರಾದ ವೈದ್ಯರು ಆರೋಪಿಸಿದ್ದಾರೆ. ಎನ್‌ಎಂಸಿ ಮೂಲಕ ವೈದ್ಯರು, ಆಸ್ಪತ್ರೆ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲಾಗುವುದು ಎಂದು ಐಎಂಎ ಈ ವಿಧೇಯಕವನ್ನು ವಿರೋಧಿಸುತ್ತಿದೆ.

---

**ಯಾವುದೇ ವೈದ್ಯರಿಗೆ ರಜೆ ನೀಡಲಾಗಿಲ್ಲ. ಎಲ್ಲ ವೈದ್ಯರು ಶನಿವಾರ ಸೇವೆಯಲ್ಲಿರುತ್ತಾರೆ. ಖಾಸಗಿ ವೈದ್ಯರ ಮುಷ್ಕರದ ಹಿನ್ನೆಲೆಯಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.**

- **ಪಂಕಜ್‌ಕುಮಾರ್ ಪಾಂಡೆ,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯುಕ್ತ.